ಅ) ರಾಜ್ಯದಲ್ಲಿ ಪತ್ರಕರ್ತರಿಗೆ ಸರ್ಕಾರವು ನೀಡುತ್ತಿರುವ ಸೌಲಭ್ಯಗಳೇನು? ಅದಕ್ಕಾಗಿ ಪತ್ರ ಕರ್ತರಿಗೆ ಇರುವ ಅರ್ಹತೆಗಳೇನು?

ಆ) ಪತ್ರಕರ್ತರು ಕೇಳಲಾಗಿರುವ ಮಾಸಾಶನ ಅರ್ಜಿಗಳೆಷ್ಟು? ಅವುಗಳಲ್ಲಿ ಎಷ್ಟು ಮಂಜೂರಾತಿಯಾಗಿದೆ?

ಇ) ಪತ್ರ ಕರ್ತರಿಗೆ ಮಾಸಾಶನ ನೀಡುವಲ್ಲಿ ವಿಳಂಬವಾಗುತ್ತಿದೆ ಎಂಬ ದೂರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 1) **ಮಾಸಾಶನ** : ಪತ್ರಿಕೋದ್ಯಮದಲ್ಲಿ ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಕಾಲ ಸೇವೆ ಸಲ್ಲಿಸಿರುವ 55 ವರ್ಷ ಮೀರಿರುವ ವಾರ್ಷಿಕ ಆದಾಯ ಮಿತಿ 10,000ರೂ.ಗಳಿಗೆ ಮೀರದ ಪತ್ರಕರ್ತರಿಗೆ ಮಾಹೆಯಾನ ಐದು ನೂರು ರೂಪಾಯಿಗಳ ಮಾಸಾಶನವನ್ನು ಜೀವನ ಪರ್ಯಂತ ನೀಡುವ ಯೋಜನ ಇಲಾಖೆಯಲ್ಲಿದೆ.

ದೀರ್ಘವಾದ ಖಾಯಿಲೆ ಮುಂತಾದ ವೈದ್ಯಕೀಯ ಕಾರಣದಿಂದಾಗಿ ಪತ್ರಿಕಾ ರಂಗದಲ್ಲಿ ಸೇವೆ ಮಾಡಲು ಆಗದೇ ಇರುವಂತಹ ಪತ್ರಕರ್ತರಿಗೆ 10 ವರ್ಷ ಸೇವೆ ಸಲ್ಲಿಸಿದ್ದರೂ ಮಾಸಾಶನ ನೀಡುವ ಅವಕಾಶ ಕಲ್ಪಿಸಿದೆ. ಮಾಸಾಶನ ಪಡೆಯುತ್ತಿದ್ದು ನಿಧನರಾದ ಪತ್ರಕರ್ತರ ಕುಟುಂಬಕ್ಕೆ 100 ರೂ. ಕುಟುಂಬ ಮಾಸಾಶನ ಮಂಜೂರು ಮಾಡಲು ಅವಕಾಶವಿದೆ.

2) **ಉಚಿತ ಬಸ್ ಕೂಪನ್ ನೀಡಿಕೆ** : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಸುದ್ದಿ ಸಂಗ್ರಹಣೆಗಾಗಿ ಪ್ರಯಾಣ ಕೈಗೊಳ್ಳಲು ಮಾನ್ಯತೆ ಪಡೆದ ಪತ್ರಕರ್ತರಿಗೆ ತಲಾ ಐದುನೂರು ರೂಪಾಯಿಗಳ ಮೌಲ್ಯದ ಬಸ್ ಕೂಪನ್‌ಗಳನ್ನು ವರ್ಷಕೊಮ್ಮೆ ಉಚಿತವಾಗಿ ನೀಡುವ ಯೋಜನೆಯು ಇಲಾಖೆಯಲ್ಲಿದೆ.

3) **ಪತ್ರಕರ್ತರ ಸಂಘಗಳಿಗೆ ಅನುದಾನ ಬಿಡುಗಡೆ** : ಪತ್ರಕರ್ತರ ಸಮಾವೇಶ ಹಾಗೂ ಪತ್ರಕರ್ತರ ಸಂಘಗಳ ಕಟ್ಟಡ, ನಿರ್ಮಾಣಕ್ಕಾಗಿ ಆಯವ್ಯಯದಲ್ಲಿ ಲಭ್ಯವಿರುವ ಅನುದಾನದ ಮಿತಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

4) **ಪತ್ರಕರ್ತರ ಅಪಘಾತ ವಿಮೆ ರಕ್ಷಣೆ ಯೋಜನೆ** : ಕರ್ನಾಟಕ ಪತ್ರಕರ್ತರ ಗ್ರಾಹಕರ ಸಂಘದ ಮೂಲಕ ಜಾರಿಯಲ್ಲಿರುವ ಈ ಯೋಜನೆಗೆ ಸರ್ಕಾರವೂ ವಿಮಾ ಕಂಪನಿಗೆ ನೀಡುವ ವಂತಿಕೆಗಾಗಿ 96ರ ಮಾರ್ಚ್‌ನಲ್ಲಿ 63 ಸಾವಿರ ರೂ.ಗಳನ್ನು ನೀಡಿದೆ.

ಆ) ಒಟ್ಟು ಸ್ವೀಕೃತಗೊಂಡ ಅರ್ಜಿಗಳು 188 ಮಂಜೂರಾದ ಪ್ರಕರಣಗಳು 155

ಇ) ಹೌದು

ಈ) ಅನುದಾನವನ್ನು ಹೆಚ್ಚಿಸಿ ಮಂಜೂರಾತಿ ನೀಡಲಾಗಿದೆ.

ಅಭಿವೃದ್ಧಿ ಮಂಡಳಿಗಳು.

1596 - ಶ್ರೀ ಬಸನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಮತ್ತು ಹಣಕಾಸು, ಯೋಜನಾ ಮತ್ತು ಕಾರ್ಮಿಕ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಭಿವೃದ್ಧಿ ಮಂಡಳಿಗಳೆಷ್ಟು? ಅವು ಯಾವುವು.

ಆ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಗಳಿಗೆ ಸರಕಾರ ಎಷ್ಟು ಹಣವನ್ನು ಕಳೆದ ಐದು ವರ್ಷಗಳಲ್ಲಿ ನೀಡಿದೆ.

ಇ) ಈ ಅಭಿವೃದ್ಧಿ ಮಂಡಳಿಗಳಿಂದ ಅಭಿವೃದ್ಧಿ ಯೋಜನೆಗಳು ಯಾವುವು?

ಈ) ಕರ್ನಾಟಕ, ಬೆಳಗಾಂ, ಧಾರವಾಡ, ವಿಜಾಪುರ, ಕಾರವಾರ ಒಳಗೊಂಡ ಮುಂಬಯಿ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲು ಸರಕಾರ ಉದ್ದೇಶಿಸಿದೆಯೇ, ಉದ್ದೇಶಿಸಿದಲ್ಲಿ ಯಾವಾಗ ಪ್ರಾರಂಭಿಸಲಾಗುವುದು.

ಉ) ಹಾಗಿದ್ದಲ್ಲಿ, ಕಾರಣವೇನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು ಮತ್ತು ಹಣಕಾಸು ಯೋಜನಾ ಮತ್ತು ಕಾರ್ಮಿಕ ಸಚಿವರು) :

ಅ) 3 ಅಭಿವೃದ್ಧಿ ಮಂಡಳಿಗಳಿವೆ. ಅವುಗಳು : ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿ.

ಆ) ಕಳೆದ 5 ವರ್ಷಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 330.62 ಕೋಟಿ ರೂ.ಗಳನ್ನು ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿಗೆ 89.50 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ರಸ್ತೆ ಮತ್ತು ಸೇತುವೆಗಳು, ಶಾಲಾ ಕಟ್ಟಡಗಳು, ಆಸ್ಪತ್ರೆ ಕಟ್ಟಡಗಳು, ಗ್ರಾಮೀಣ ಹಾಗೂ ನಗರ ನೀರು ಸರಬರಾಜು ಯೋಜನೆಗಳು, ಗ್ರಾಮಿಣ ವಿದ್ಯುದ್ದೀಕರಣ, ವಸತಿ ಗೃಹ, ಇತ್ಯಾದಿಗಳು.

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ರಾಜ್ಯದ ಪೇಕ್ಷಣೀಯ ಸ್ಥಳಗಳು.

2637.- ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದ ಯಾವ ಯಾವ ಸ್ಥಳಗಳನ್ನು ಪ್ರೇಕ್ಷಣೀಯ ಸ್ಥಳಗಳೆಂದು ಸರ್ಕಾರವು ಗುರುತಿಸಿ ಘೋಷಿಸಿದೆ. ಈ ಸ್ಥಳಗಳಲ್ಲಿ ಸರ್ಕಾರವು ಪ್ರವಾಸಿಗಳಿಗಾಗಿ ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ?

2) ಈ ಸ್ಥಳಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ : ಆರ್ಥಿಕ ನೆರವನ್ನು ಪಡೆದುಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಅದರ ಮೊತ್ತವೆಷ್ಟು?

3) ಹೊಸಪೇಟೆ ಅಥವಾ ಕುಷ್ಟಗಿ ಸ್ಥಳಗಳಿಂದ ಪಟ್ಟದಕಲ್ಲು, ಬಾದಾಮಿ, ಐಹೊಳೆ ಕೂಡಲ ಸಂಗಮ ಮತ್ತು ಬಿಜಾಪುರ ಈ ಸ್ಥಳಗಳಿಗೆ ಭೇಟಿ ನೀಡಿ ಮತ್ತೆ ವಾಪಸ್ ಬರಲು ವಾಹನ ಸೌಕರ್ಯ ಒದಗಿಸಲಾಗುವುದೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :